# ಸಮಾಜ ಕಲ್ಯಾಣ ಇಲಾಖೆ

## ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ
## ಮತ್ತು
## ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಅಭಿವೃದ್ಧಿ ನಿಗಮದ ಅಧ್ಯಕ್ಷರು ಇವರನ್ನು ಒಳಗೊಂಡ ವಿವಿಧ ಇಲಾಖಾ ಮುಖ್ಯಸ್ಥರು/ ಅಧಿಕಾರಿಗಳು ಮತ್ತು ಸಿಬ್ಬಂದಿಯವರು ಗುಜರಾತ್ ರಾಜ್ಯಕ್ಕೆ ದಿನಾಂಕ:11.10.2022 ಮತ್ತು 12.10.2022ರವರೆಗೆ ಭೇಟಿ ನೀಡಿ ನಡೆಸಿದ

# ಅಧ್ಯಯನದ ವರದಿ



ಕರ್ನಾಟಕ ಸರ್ಕಾರ

**ಸರ್ಕಾರದ ಆದೇಶ ಸಂಖ್ಯೆ: ಎಸ್‌ಡಬ್ಲ್ಯೂಡಿ/90/ಎಸ್‌ಡಿಸಿ/2022(1), ದಿನಾಂಕ 06/09/2022ರಂತೆ ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ ಮತ್ತು ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷರು ಇವರನ್ನು ಒಳಗೊಂಡ ವಿವಿಧ ಇಲಾಖಾ ಮುಖ್ಯಸ್ಥರು/ಅಧಿಕಾರಿಗಳು ಮತ್ತು ಸಿಬ್ಬಂದಿಯವರು ಗುಜರಾತ್ ರಾಜ್ಯಕ್ಕೆ ದಿನಾಂಕ:11.10.2022 ಮತ್ತು 12.10.2022ರವರೆಗೆ ಭೇಟಿ ನೀಡಿ ನಡೆಸಿದ ಅಧ್ಯಯನದ ವರದಿ.**

ಮ್ಯಾನ್‌ಹೋಲ್, ಸೆಪ್ಟಿಕ್‌ಟ್ಯಾಂಕ್‌ಗಳಲ್ಲಿ ಕಾರ್ಯನಿರ್ವಹಿಸುವಾಗ ಸಂಭವಿಸುತ್ತಿದ್ದ ಸಾವು-ನೋವುಗಳನ್ನು ತಡೆಗಟ್ಟುವ ಉದ್ದೇಶದಿಂದ Prohibition of Employment as Manual Scavengers and their Rehabilitation Act 2013ರಲ್ಲಿ ಕಾಯ್ದೆ ಮತ್ತು ನಿಯಮವನ್ನು ಭಾರತ ಸರ್ಕಾರವು ಜಾರಿಗೆ ತಂದಿದ್ದರೂ, ಇದರ ಮೂಲ ಉದ್ದೇಶವಾದ ಯಾವುದೇ ಕಾರಣಕ್ಕೂ ಮ್ಯಾನ್‌ಹೋಲ್ ಮತ್ತು ಅಪಾಯಕಾರಿ ಸ್ವಚ್ಛತಾ ಕಾರ್ಯಕ್ಕೆ ಮಾನವ ಶಕ್ತಿಯನ್ನು ಬಳಸದೇ ಯಂತ್ರೋಪಕರಣಗಳನ್ನು ಬಳಸುವ ಮೂಲಕ ಈ ಅನಿಷ್ಠ ಪದ್ಧತಿಯನ್ನು ನಿರ್ಮೂಲನೆ ಮಾಡುವುದಾಗಿದ್ದು, ಈ ಕಾಯ್ದೆ ಜಾರಿಗೆ ಬಂದು 9 ವರ್ಷಗಳು ಕಳೆದರೂ ಸಹ, ಅಷ್ಟೊಂದು ಪರಿಣಾಮಕಾರಿಯಾಗಿ ಅನುಷ್ಠಾನಗೊಳ್ಳದೇ 1995ರಿಂದ ಇಲ್ಲಿಯವರೆಗೆ ಮ್ಯಾನ್‌ಹೋಲ್ ಮತ್ತು ಅಪಾಯಕಾರಿ ಸ್ವಚ್ಛತಾ ಕೆಲಸವನ್ನು ನಿರ್ವಹಿಸುವಾಗ ಮೃತಪಟ್ಟ ಕಾರ್ಮಿಕರ 90 ಪ್ರಕರಣಗಳು ಬೆಳಕಿಗೆ ಬಂದಿರುತ್ತದೆ.

ರಾಜ್ಯ ಸರ್ಕಾರದಲ್ಲಿ ಸಫಾಯಿ ಕರ್ಮಚಾರಿ ಮತ್ತು ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಸಾಮಾಜಿಕ, ಆರ್ಥಿಕ ಸುಧಾರಣೆ ಮತ್ತು ಅಭಿವೃದ್ಧಿಗಾಗಿ ಹಲವಾರು ಯೋಜನೆಗಳನ್ನು ರೂಪಿಸಿದ್ದರೂ ಸಹ ಹೆಚ್ಚಿನ ಪ್ರಮಾಣದಲ್ಲಿ ಸುಧಾರಣೆ ಕಂಡುಬಂದಿರುವುದಿಲ್ಲ ಹಾಗೂ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಸಾವಿನ ಪ್ರಕರಣಗಳ ಸಂಖ್ಯೆ ಇಳಿಮುಖವಾಗುತ್ತಿಲ್ಲವಾದ ಕಾರಣ ಇತರೆ ರಾಜ್ಯಗಳಲ್ಲಿ ಅಳವಡಿಸಿಕೊಂಡಿರುವ ಚಾಲ್ತಿಯಲ್ಲಿರುವ ಸ್ಯಾನಿಟೇಷನ್ ವ್ಯವಸ್ಥೆ, ಸ್ಕ್ಯಾವೆಂಜರ್ ಕ್ಲೀನಿಂಗ್ ಪದ್ಧತಿ ಹಾಗೂ ಸ್ಯಾನಿಟೇಷನ್ ಕಾರ್ಮಿಕರು/ಸ್ವಚ್ಛತಾ ಕಾರ್ಮಿಕರಿಗೆ ಜಾರಿಯಲ್ಲಿರುವ ಸರ್ಕಾರಿ ಸವಲತ್ತುಗಳಾದ ವಸತಿ, ಶಿಕ್ಷಣ, ಆರೋಗ್ಯ, ತರಬೇತಿ, ಕಾರ್ಮಿಕರು ಧರಿಸುವ ಸುರಕ್ಷತಾ ಪರಿಕರಗಳು, ವೇತನ, ವಿಶ್ರಾಂತಿ ಕೊಠಡಿ, ಸಮವಸ್ತ್ರ ಇತ್ಯಾದಿಗಳ ಕುರಿತು ಅಧ್ಯಯನ ನಡೆಸಿ ನಮ್ಮ ರಾಜ್ಯದಲ್ಲೂ ಸಹ ಅಳವಡಿಸಿಕೊಳ್ಳಲು ಸರ್ಕಾರದ ಆದೇಶ ಸಂಖ್ಯೆ:ಎಸ್‌ಡಬ್ಲ್ಯೂಡಿ/90/ಎಸ್

ಡಿಸಿ/2022(1) ದಿನಾಂಕ:06/09/2022ರಂತೆ ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ ಮತ್ತು ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಅಭಿವೃದ್ಧಿ ನಿಗಮದ ಅಧ್ಯಕ್ಷರು ಇವರನ್ನು ಒಳಗೊಂಡ ವಿವಿಧ ಅನುಷ್ಠಾನ ಇಲಾಖಾ ಮುಖ್ಯಸ್ಥರು/ಅಧಿಕಾರಿಗಳು ಮತ್ತು ಸಿಬ್ಬಂದಿಯವರು ಗುಜರಾತ್ ರಾಜ್ಯಕ್ಕೆ ದಿನಾಂಕ:11.10.2022 ಮತ್ತು 12.10.2022ರವರೆಗೆ ಭೇಟಿ ನೀಡಿ ನಡೆಸಿದ ಅಧ್ಯಯನದ ವರದಿ.

ರಾಜ್ಯ ಸರ್ಕಾರದ ಅನುಮೋದನೆಯಂತೆ ಈ ಎಲ್ಲಾ ಕೆಳಕಂಡ ಸದಸ್ಯರುಗಳನ್ನೊಳಗೊಂಡಂತೆ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ತಂಡವು ದಿನಾಂಕ:11.10.2022 ಮತ್ತು 12.10.2022ರವರೆಗೆ ಗುಜರಾತ್ ರಾಜ್ಯದ ಅಹಮದಾಬಾದ್ ಹಾಗೂ ಗಾಂಧಿನಗರ ಮುನ್ಸಿಪಲ್ ಕಾರ್ಪೋರೇಷನ್, ವಿವಿಧ ಡಂಪಿಂಗ್ ಯಾರ್ಡ, ಮೆಟೀರೀಯಲ್ ರಿಕವರಿ ಫೆಸಿಲಿಟಿ, ಕನ್ಸ್ಟ್ರಕ್ಷನ್ ಮತ್ತು ಡೆಮಾಲಿಷನ್ ಯೂನಿಟ್‌ಗಳಿಗೆ ಭೇಟಿ ನೀಡಿ ಅಧ್ಯಯನವನ್ನು ಕೈಗೊಳ್ಳಲಾಗಿರುತ್ತದೆ.

| ಕ್ರ ಸಂ. | ಹೆಸರು ಶ್ರೀ/ಶ್ರೀಮತಿ | ಹುದ್ದೆ | ಕಚೇರಿ ಸ್ಥಳ |
|---|---|---|---|
| 1 | ಎಂ.ಶಿವಣ್ಣ | ಅಧ್ಯಕ್ಷರು | ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಆಯೋಗ |
| 2 | ಕೆ.ಪಿ.ವೆಂಕಟೇಶ್ | ಅಧ್ಯಕ್ಷರು | ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮ |
| 3 | ಚಂದ್ರಕಲಾ | ಕಾರ್ಯದರ್ಶಿ | ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಆಯೋಗ |
| 4 | ಎಸ್.ಎಂ.ಗಿರೀಶ್ | ಕಾರ್ಯನಿರ್ವಾಹಕ ಅಭಿಯಂತರರು | ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು |
| | ಕಿರಣ್ ಚಂದ್ರ ಮುತ್ತು | ಪರಿಸರ ಅಭಿಯಂತರರು ನಿರ್ದೇಶಕರ ಪರವಾಗಿ | |
| 5 | ಯೋಗೇಶ್ | ಘನತ್ಯಾಜ್ಯ ಜಂಟಿ ಆಯುಕ್ತರು ಪರವಾಗಿ | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ |
| 6 | ನಿಕಿತಾ | ಆಯುಕ್ತರ ಪರವಾಗಿ | ಮಹಾನಗರ ಪಾಲಿಕೆ ತುಮಕೂರು |
| 7 | ಸಂಧ್ಯಾ | ವೈದ್ಯರು (ಆರೋಗ್ಯಾಧಿಕಾರಿ) | ಮಹಾನಗರ ಪಾಲಿಕೆ ವೈದ್ಯರು |
| 8 | ಬಿ.ಎಸ್.ವಿಮಲ | ಅಧ್ಯಕ್ಷರ ಆಪ್ತ ಕಾರ್ಯದರ್ಶಿ | ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಆಯೋಗ |
| 9 | ಓಬಳೇಶ್ | ಸಂಚಾಲಕರು | ಸಫಾಯಿ ಕರ್ಮಚಾರಿ ಕಾವಲು ಸಮಿತಿ, ಕರ್ನಾಟಕ |
| 10 | ರಾಘವೇಂದ್ರ | ಅಧ್ಯಕ್ಷರ ಆಪ್ತ ಸಹಾಯಕರು | ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಆಯೋಗ |

## “ಪಿರಾನಾ ಡಂಪಿಂಗ್ ಯಾರ್ಡ್”

ದಿನಾಂಕ 11.10.2022ರಂದು ಬೆಳಗ್ಗೆ ತಂಡವು ಗುಜರಾತ್ ರಾಜ್ಯದ ಅಹಮದಾಬಾದ್‌ನ **“ಪಿರಾನಾ ಡಂಪಿಂಗ್ ಯಾರ್ಡ್”ನ್ನು** ವೀಕ್ಷಿಸಲಾಯಿತು. ಅಹಮದಾಬಾದ್‌ನ ನಗರದ ಕಸ ಮತ್ತು ತ್ಯಾಜ್ಯಗಳನ್ನು ಸುಮಾರು 30-40 ವರ್ಷಗಳ ಹಿಂದಿನಿಂದಲೂ ಪಿರಾನಾ ಡಂಪಿಂಗ್‌ಯಾರ್ಡ್‌ನಲ್ಲಿ ತಂದು ಸುರಿಯುತ್ತಿರುತ್ತಾರೆ. ಪ್ರತಿನಿತ್ಯ 3500 ಟನ್ ಕಸ ಸಂಗ್ರಹಣೆಯಾಗುತ್ತಿದೆ. ಈ ರೀತಿ ಶೇಖರಣೆಯಾದ ಕಸ ಸಂಗ್ರಹಣೆಯಿಂದ ಒಂದು ದೊಡ್ಡ ಬೆಟ್ಟದಂತೆ ಆಗಿರುತ್ತದೆ. ಇತ್ತೀಚೆಗೆ ಸರ್ವೋಚ್ಛ ನ್ಯಾಯಾಲಯದ ಹಸಿರು ನ್ಯಾಯಪೀಠದ ನಿರ್ದೇಶನದಂತೆ ಪ್ರತಿನಿತ್ಯ ಸುಮಾರು 1000 ಟನ್‌ನಷ್ಟು ಕಸ ವಿಲೇವಾರಿಯಾಗುತ್ತಿರುತ್ತದೆ. ಅಹಮದಾಬಾದ್ ನಗರವು ಅಭಿವೃದ್ಧಿ ಹೊಂದುತ್ತಿರುವುದರಿಂದ ಸಾರ್ವಜನಿಕರ ಒತ್ತಾಯದ ಮೇರೆಗೆ ಟೆಂಡರ್ ಮೂಲಕ ಯಂತ್ರಗಳ ಸಹಾಯದಿಂದ ಕಸ ವಿಲೇವಾರಿ ಮಾಡುತ್ತಿದ್ದು. ಬಯೋಮೈನಿಂಗ್ ಮಾಡುತ್ತಿದ್ದು ಇದರಲ್ಲಿ ಉಪಯೋಗಕ್ಕೆ ಬರುವಂತಹ ಮರುಬಳಕೆ ವಸ್ತುಗಳನ್ನು ಮಣ್ಣಿನ ಪುಷ್ಟೀಕರಣಕ್ಕಾಗಿ ಗೊಬ್ಬರದ ರೂಪದಲ್ಲಿ ಉಪಯೋಗಿಸಲಾಗಿರುತ್ತದೆ. ತ್ಯಾಜ್ಯವನ್ನು ಹಳ್ಳ ಹಾಗೂ ತಗ್ಗು ರಸ್ತೆಗಳನ್ನು ಸಮತಲಗೊಳಿಸಲು ಉಪಯೋಗಿಸಲಾಗುತ್ತಿದೆ.

## ನೆಪ್ರಾ ಕಂಪನಿ ಸಾಲಿಡ್ ವೇಸ್ಟ್ ಮ್ಯಾನೇಜ್‌ಮೆಂಟ್

ನೆಪ್ರಾ ಕಂಪನಿಯವರು ಗುತ್ತಿಗೆ ಅದಾರದಲ್ಲಿ ನಡೆಸುತ್ತಿರುವ ಯಾಂತ್ರೋಪಕರಣಗಳ ಮೂಲಕ ನಡೆಸುತ್ತಿರುವ ಕಸ ವಿಲೇವಾರಿ ಘಟಕದಲ್ಲಿ ಸುಮಾರು 34 ಸ್ವಚ್ಛತಾ ಕಾರ್ಮಿಕರು ಕಾರ್ಯ ನಿರ್ವಹಿಸುತ್ತಿದ್ದು. ಮಾಸಿಕ ರೂ.8000 ರಿಂದ 9000/- ವೇತನ ನೀಡಲಾಗುತ್ತಿದೆ. ಇತರೆ ಸರ್ಕಾರದ ಸವಲತ್ತುಗಳ ಬಗ್ಗೆ ಸ್ಪಷ್ಟವಾದ ಮಾಹಿತಿ ನೀಡಿರುವುದಿಲ್ಲ, ಈ ಸಂಸ್ಥೆಯಲ್ಲಿ ಒಣ ತ್ಯಾಜ್ಯಗಳನ್ನು ಸಂಗ್ರಹಿಸಿ ಕಿ.ಲೋ ಒಂದಕ್ಕೆ ರೂ 30/-ಗಳಲ್ಲಿ ಖರೀದಿಸಲಾಗುತ್ತದೆ. ಒಬ್ಬ ವ್ಯಕ್ತಿಯು ಒಂದು ದಿನಕ್ಕೆ ಕೇವಲ 10 ಕೆ.ಜಿಗಳನ್ನು ಮಾತ್ರ ಮಾರಾಟ ಮಾಡಬಹುದಾಗಿರುತ್ತದೆ. ಈ ರೀತಿ ಸಂಗ್ರಹಿಸಿದ ತ್ಯಾಜ್ಯಗಳನ್ನು ಮರು ಬಳಕೆಗೆ ಉಪಯೋಗಿಸಲಾಗುತ್ತಿದೆ. **ಈ ಸಂಸ್ಥೆಯಲ್ಲಿರುವ ಯಂತ್ರೋಪಕರಣಗಳು ಸ್ವಯಂಚಾಲಿತ ವಾಗಿದ್ದು, ಭಾರತ ದೇಶದಲ್ಲಿಯೇ ಮೊಟ್ಟಮೊದಲ ಸ್ವಯಂಚಾಲಿತ ಯಂತ್ರದ ಸಂಸ್ಥೆಯಾಗಿರುತ್ತದೆ. ಇಲ್ಲಿನ ಪ್ರತಿಯೊಂದು ಕಾರ್ಯವನ್ನು ಯಂತ್ರದ ಮೂಲಕವೇ ನಿರ್ವಹಿಸಲಾಗುತ್ತಿದೆ**. ಈ ಸಂಸ್ಥೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಮಹಿಳಾ ಕಾರ್ಮಿಕರು ಕೆಲಸ ನಿರ್ವಹಿಸುತ್ತಿರುತ್ತಾರೆ.

**ಸಿ ಅಂಡ್ ಡಿ ಯೂನಿಟ್ (ಕನ್‌ಸ್ಟ್ರಕ್ಷನ್ ಮತ್ತು ಡೆಮೋಲಿಷನ್)**

ಅಹಮದಾಬಾದ್ ನಗರದಲ್ಲಿ ಕಟ್ಟಡಗಳ ನಿರ್ಮಾಣ ಮತ್ತು ನಿರ್ನಾಮದ ಸಂದರ್ಭದಲ್ಲಿ ಲಭ್ಯವಾಗುವ ಕಚ್ಚಾವಸ್ತುಗಳನ್ನು ಕ್ರಷ್ ಮಾಡಿ ಪ್ರತ್ಯೇಕಿಸಿ ಮರು ಉಪಯೋಗಕ್ಕೆ ಬಳಸಲಾಗುತ್ತಿದೆ.

ಈ ರೀತಿಯ ವಸ್ತುಗಳನ್ನು ಸಂಗ್ರಹಿಸಿ ಸಿಮೆಂಟ್ ಉಪಕರಣಗಳನ್ನು ತಯಾರಿಸಲಾಗುತ್ತಿದೆ. ಈ ರೀತಿ ತಯಾರಿಸಿದ ಉಪಕರಣಗಳನ್ನು ಪಾರ್ಕ್‌ಗಳಲ್ಲಿ ಬೆಂಚ್‌ಕಲ್ಲುಗಳು, ಕಾಂಪೌಂಡ್ ವಾಲ್‌ನಂತಹ ಸಿಮೆಂಟ್ ಉಪಕರಣಗಳನ್ನು ಮೆಟ್ರೋ ಹಾಗೂ ರಸ್ತೆಗಳಲ್ಲಿ ಅಳವಡಿಸಿಕೊಳ್ಳಲು ಮಾರಾಟ ಮಾಡುತ್ತಿರುತ್ತಾರೆ.

ಈ ರೀತಿ ಕಟ್ಟಡದ ಹಳೆಯ ವಸ್ತುಗಳಿಂದ ಸಿಮೆಂಟ್ ಸಲಕರಣೆಗಳನ್ನು ಸಿದ್ಧಪಡಿಸಿ ಉಪಯೋಗಕ್ಕೆ ಬಳಸುತ್ತಿರುವುದು ಉತ್ತಮವಾದ ಕಾರ್ಯವಾಗಿದ್ದು ಬೆಳವಣಿಗೆಯನ್ನು ಕಂಡಿರುತ್ತದೆ.

**ವೇಸ್ಟ್ ಟು ಎನರ್ಜಿ ಪ್ಲಾಂಟ್ (waste to energy plant)**

ತ್ಯಾಜ್ಯ ವಸ್ತುಗಳನ್ನು ಸಂಗ್ರಹಿಸಿ ಇವುಗಳನ್ನು ಎನರ್ಜಿಯಾಗಿ ಪರಿವರ್ತಿಸುವ ವಿಧಾನವನ್ನು ಅಳವಡಿಸಿಕೊಳ್ಳಲು ಉದ್ದೇಶಿಸಲಾಗಿದ್ದು, ಇದು ನಿರ್ಮಾಣ ಹಂತದಲ್ಲಿರುತ್ತದೆ.

**ಸಂಜೆ: ೫.೦೦ ಗಂಟೆಗೆ**

ಅಹಮದಾಬಾದ್ ಪಾಲಿಕೆಯ ಘನತ್ಯಾಜ್ಯ ನಿರ್ವಹಣಾ ವಿಭಾಗದ ನಿರ್ದೇಶಕರಾದ ಶ್ರೀ.ಹರ್ಷದ್ ರಾಯ್ ಸೋಲಂಕಿರವರೊಂದಿಗೆ ಅಹಮದಾಬಾದ್ ಮಹಾನಗರ ಪಾಲಿಕೆಯ ಬಗ್ಗೆ ಪಿಪಿಟಿ ಮೂಲಕ ವಿವರಿಸಿದರು.

- ಅಹಮದಾಬಾದ್ ಮಹಾನಗರ ಪಾಲಿಕೆಯಲ್ಲಿ 1,300 ಖಾಯಂ ಪೌರಕಾರ್ಮಿಕರು ಕರ್ತವ್ಯ ನಿರ್ವಹಿಸುತ್ತಾರೆ.
- ಮನೆ-ಮನೆ ಕಸ ಸಂಗ್ರಹಿಸುವ ಕಾರ್ಮಿಕರು 1,000 ಇದ್ದು ಇವರು ಗುತ್ತಿಗೆ ಪದ್ಧತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಾರೆ ಎಂದು ತಿಳಿಸಿದರು.

**ಪೌರಕಾರ್ಮಿಕರ ಸುರಕ್ಷತೆಗಾಗಿ ನೀಡುತ್ತಿರುವ ಸುರಕ್ಷತಾ ಸಲಕರಣೆಗಳ ವಿವರ :**

**ಸುರಕ್ಷತಾ ಪರಿಕರಗಳ ಬಗ್ಗೆ:** ಗುಜರಾತ್ ಅಹಮದಾಬಾದ್ ಮಹಾನಗರ ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರಿಗೆ ಯಾವುದೇ ಸುರಕ್ಷತಾ ಸಲಕರಣೆಗಳನ್ನು ಬಳಸದೇ ಕೆಲಸ ನಿರ್ವಹಿಸುತ್ತಿರುತ್ತಾರೆ. ಈ ಬಗ್ಗೆ ವಿಚಾರಿಸಿದಾಗ ಅಧಿಕಾರಿಗಳು ಸುರಕ್ಷಿತ ಸಲಕರಣೆಗಳಿಲ್ಲದಿದ್ದರೂ ಉತ್ತಮವಾಗಿ ಕೆಲಸ ಮಾಡುತ್ತಾರೆ ಎಂಬುದಾಗಿ ತಿಳಿಸಿದರು.

**ವೇತನ ಮತ್ತು ಇತರೆ ಭತ್ಯೆಗಳ ಬಗ್ಗೆ ವಿವರಿಸಿ :**

ಗುಜರಾತ್‌ನ ಅಹಮದಾಬಾದ್‌ನಲ್ಲಿ ಕಾರ್ಯನಿರ್ವಹಿಸುತ್ತಿರುವ ಖಾಯಂ ಪೌರಕಾರ್ಮಿಕರಿಗೆ ರೂ.28,000 ವೇತನ ನೀಡಲಾಗುತ್ತಿರುತ್ತದೆ. ಆದರೆ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರಿಗೆ ರೂ. 8,000/- ರಿಂದ 9,000/- ವೇತನವನ್ನು ನೀಡುತ್ತಿರುವುದಾಗಿ ತಿಳಿಸಿದರು. ಸ್ವಚ್ಛತಾ ಕಾರ್ಮಿಕರು ತಮ್ಮ ಕೆಲಸದಲ್ಲಿ ಮುಂದುವರೆಯಲು ಇಚ್ಛಿಸದಿದ್ದಲ್ಲಿ, ಅವರ ಮಕ್ಕಳಿಗೆ ಅವರ ಕೆಲಸವನ್ನು ಕೊಡುತ್ತಿರುವುದಾಗಿ ತಿಳಿಸಿರುತ್ತಾರೆ.

**ವಸತಿ, ಮಕ್ಕಳ ಶಿಕ್ಷಣ, ಆರೋಗ್ಯ ಸೌಲಭ್ಯಗಳ ಬಗ್ಗೆ :**

ಅಹಮದಾಬಾದ್‌ನಲ್ಲಿ ಕಾರ್ಯನಿರ್ವಹಿಸುತ್ತಿರುವ ಖಾಯಂ ಪೌರಕಾರ್ಮಿಕರಿಗೆ ಅಪಾರ್ಟ್‌ಮೆಂಟ್ ಗಳ ಮಾದರಿಯಲ್ಲಿ ವಸತಿ ನಿರ್ಮಿಸಿ ಕೊಡಲಾಗಿದೆ. ಅಹಮದಾಬಾದ್ ಪಾಲಿಕೆಯು ನಡೆಸುವ ಶಾಲೆಗಳಲ್ಲಿ ಉಚಿತ ಶಿಕ್ಷಣ ನೀಡಲಾಗಿರುತ್ತದೆ. ಅಹಮದಬಾದ್ ನಗರ ಪಾಲಿಕೆ ನಡೆಸುವ ಅಸ್ಪತ್ರೆಗಳಲ್ಲಿ ಉಚಿತ ಚಿಕಿತ್ಸೆ ನೀಡಲಾಗಿರುತ್ತದೆ.

**ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್ ಪದ್ಧತಿ ನಿರ್ಮೂಲನೆ ಬಗ್ಗೆ :**

**ಸೋಲಾಂಕಿಯವರ ಉತ್ತರ:** ನಮ್ಮ ನಗರದಲ್ಲಿ ಮಲಹೊರುವ ಪದ್ಧತಿಯೇ ಇಲ್ಲ. ಇದೂ ಪ್ರಧಾನಿ ನರೇಂದ್ರ ಮೊದಿಯವರ ನಗರ, ಇಲ್ಲಿ ಬಹಳ ವರ್ಷಗಳ ಹಿಂದೆಯೇ ಬಯಲು ಶೌಚಾಲಯ ಮುಕ್ತ ನಗರವನ್ನಾಗಿ ಘೋಷಿಸಲಾಗಿದೆ. ಆದ್ದರಿಂದ ಇಲ್ಲಿ ಯಾವುದೇ ರೀತಿಯ ಮಲಹೊರುವ ಪದ್ಧತಿ ಅಚರಣೆಯಲ್ಲಿ ಇರುವುದಿಲ್ಲವೆಂದು ತಿಳಿಸಿದರು.

ದಿನಾಂಕ:12.10.2022ರಂದು **"ಜನವಿಕಾಸ್ ಸ್ವಯಂಸೇವಾ ಸಂಸ್ಥೆ"**ಯಲ್ಲಿ ಅನೌಪಚಾರಿಕವಾಗಿ ಅಹಮದಾಬಾದ್ ನಗರದ ಸಫಾಯಿ ಕರ್ಮಚಾರಿ ಸಂಘಟನೆಗಳ ಮುಖಂಡರ ಸಭೆಯನ್ನು Center for Educational Environment ಕೇಂದ್ರದಲ್ಲಿ ಆಯೋಜಿಸಲಾಯಿತು. ಸಭೆಯಲ್ಲಿ ಹಾಜರಿದ್ದ ಮುಖಂಡರು ಅಹಮದಾಬಾದ್ ಗ್ರೇಟರ್ ಮಹಾನಗರ ಪಾಲಿಕೆಯ ಅಧಿಕಾರಿಗಳು ಪೌರಕಾರ್ಮಿಕರ ಬಗ್ಗೆ ತೋರುತ್ತಿರುವ ಕಾಳಜಿಯ ಬಗ್ಗೆ ಈ ಕೆಳಕಂಡಂತೆ ವ್ಯಕ್ತಪಡಿಸಿರುತ್ತಾರೆ.

- ಅಹಮದಾಬಾದ್‌ನಲ್ಲಿ 1980ರಿಂದ ಪೌರಕಾರ್ಮಿಕರ ನೇಮಕಾತಿ ನಡೆದಿರುವುದಿಲ್ಲ.
- ಗುತ್ತಿಗೆ ಪದ್ಧತಿ ಮುಂದುವರೆದಿರುತ್ತದೆ.
- 5,000 ದಿಂದ 6,000 ಜನ ಗುತ್ತಿಗೆ ಪೌರಕಾರ್ಮಿಕರಿದ್ದು, ಕನಿಷ್ಠ ವೇತನ ರೂ.12,000/- ಪಾವತಿಸಲಾಗುತ್ತಿದೆ.
- ಪೌರಕಾರ್ಮಿಕರಿಗೆ ಕಳಪೆ ವಸತಿಗಳನ್ನು ನೀಡಿದ್ದು, ಅವುಗಳ ನಿರ್ವಹಣೆ ಸಮರ್ಪಕವಾಗಿ ಇಲ್ಲದ ಕಾರಣ ವಸತಿ ಗೃಹಗಳು ದುಸ್ಥಿತಿಯಲ್ಲಿದ್ದು, ವಾಸಕ್ಕೆ ಯೋಗ್ಯವಾಗಿರುವುದಿಲ್ಲ.
- ಪೌರಕಾರ್ಮಿಕರ ಮಕ್ಕಳ ವಿಧ್ಯಾಭ್ಯಾಸಕ್ಕಾಗಿ ಪ್ರತ್ಯೇಕ ಯೋಜನೆಗಳು ಇರುವುದಿಲ್ಲ.
- ಮ್ಯಾನ್ಯುಯಲ್ ಸ್ಕ್ಯಾವೆಂಜರ್ ಪದ್ಧತಿಯ ಬಗ್ಗೆ ಕಾಯ್ದೆಯ ಪರಿಣಾಮಕಾರಿ ಅನುಷ್ಠಾನ ಆಗಿರುವುದಿಲ್ಲ.
- ಸುಮಾರು 8,000 ಜನ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಿದ್ದು, ಕಾಯ್ದೆ ಪ್ರಕಾರ ಸ್ವ-ಘೋಷಣೆ ಮಾಡಿಕೊಂಡಿರುತ್ತಾರೆ. ಆದರೆ ನೋಂದಾವಣಿಯಾಗಿರುವುದಿಲ್ಲ ಮತ್ತು ಪುನರ್ವಸತಿ ಕಲ್ಪಿಸಿರುವುದಿಲ್ಲ.
- ಇಲ್ಲಿಯವರೆಗೂ 53 ಜನ ಮ್ಯಾನ್‌ಹೋಲ್ ಸ್ವಚ್ಛಗೊಳಿಸುವಾಗ ಮೃತಪಟ್ಟಿದ್ದು, ಸರ್ವೋಚ್ಛ ನ್ಯಾಯಾಲಯದ ತೀರ್ಪಿನಂತೆ ಪರಿಹಾರಧನ ನೀಡಿರುವುದಿಲ್ಲ.

ಮೇಲ್ಕಂಡ ಅಂಶಗಳನ್ನು ಗಮನಿಸಿದಾಗ ಕರ್ನಾಟಕ ರಾಜ್ಯವು ಸಫಾಯಿ ಕರ್ಮಚಾರಿಗಳಿಗೆ ಮತ್ತು ಎಂ.ಎಸ್ ಕಾಯ್ದೆ ಮತ್ತು ನಿಯಮಗಳು 2013ನ್ನು ಪರಿಣಾಮಕಾರಿಯಾಗಿ ಸಂಬಂಧಪಟ್ಟ ಇಲಾಖೆಗಳಿಂದ ಅನುಷ್ಠಾನಗೊಳಿಸುವಲ್ಲಿ ಯಶಸ್ವಿಯಾಗಿರುತ್ತದೆ.

**ಅಹಮದಾಬಾದ್ ನಗರದ ಸಾಯಿಬಾಗ್ ದುದೇಶ್ವರ್ ಪ್ರದೇಶದ ಸ್ಲೀಪರ್ ಕಾಲೋನಿ**

ಸ್ಲೀಪರ್ ಕಾಲೋನಿಯನ್ನು ವೀಕ್ಷಿಸಲು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಭೇಟಿ ನೀಡಲಾಯಿತು.

- ಈ ವಸತಿ ಕಟ್ಟಡ ಸಮುಚ್ಛವನ್ನು 2010ರಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಆವಾಸ್ ವಸತಿ ಯೋಜನೆಯಡಿ ನಿರ್ಮಿಸಲಾಗಿದೆ.
- ಅತ್ಯಂತ ಕಳಪೆ ಕಾಮಗಾರಿಯಾಗಿದ್ದು, ಕೇವಲ 10-12 ವರ್ಷಗಳಲ್ಲಿ ಕಟ್ಟಡವು ಸಂಪೂರ್ಣ ಹಾಳಾಗಿದ್ದು, ಶಿಥಿಲವಾಗಿರುತ್ತದೆ.
- ಕುಡಿಯುವ ನೀರಿನ ಪೈಪ್ ಮತ್ತು ಶೌಚಗುಂಡಿಯ ಪೈಪ್‌ಗಳು ಒಂದಕ್ಕೊಂದು ಸೇರಿದಂತೆ ಜೋಡಿಸಲ್ಪಟ್ಟಿದ್ದು, ಎರಡೂ ಪೈಪ್‌ಗಳು ಒಡೆದು ಹೋಗಿದ್ದು, ಒಂದರ ನೀರು ಇನ್ನೊಂದು ಪೈಪ್‌ಗೆ ಜೋಡಣೆಯಾಗಿದ್ದು, ಬಹಳ ಹೀನಾಯಸ್ಥಿತಿಯಲ್ಲಿ ವಾಸಿಸುತ್ತಿರುತ್ತಾರೆ.





**ವಿಧಾನ ಸೌಧದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಸಚಿವರ ಭೇಟಿ**

ಸಚಿವರಿಗೆ ಸಮಾಜ ಕಲ್ಯಾಣ ಇಲಾಖೆಯು ಎಂ.ಎಸ್ ಕಾಯ್ದೆ ಮತ್ತು ನಿಯಮಗಳು 2013ರನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ನೋಡಲ್ ಇಲಾಖೆ ಎಂಬ ಬಗ್ಗೆ ಮಾಹಿತಿ ಇರುವುದಿಲ್ಲ. ಗುಜರಾತ್ ರಾಜ್ಯದಲ್ಲಿ ಆ ರಾಜ್ಯದ ಮಾಹಿತಿಯನ್ನು ಕಲಿಯುವುದಕ್ಕಿಂತ ಹೆಚ್ಚಾಗಿ ನಮ್ಮ ರಾಜ್ಯದಲ್ಲಿರುವ ಸೌಲಭ್ಯಗಳ ಬಗ್ಗೆ ಅಲ್ಲಿನ ಅಧಿಕಾರಿಗಳಿಗೆ ತಿಳಿಸಲಾಯಿತು.

**ಅಹಮದಾಬಾದ್ ಗ್ರೇಟರ್ ಮಹಾನಗರ ಪಾಲಿಕೆಯು ಆಯುಕ್ತರೊಂದಿಗೆ ಸಭೆ**

- ಅಹಮದಾಬಾದ್ ಮಹಾನಗರ ಪಾಲಿಕೆಯ ಘನತ್ಯಾಜ್ಯ ನಿರ್ವಹಣಾ ವಿಭಾಗದ ಉಪ ನಿರ್ದೇಶಕರು ಪೌರಕಾರ್ಮಿಕರ ಕ್ಷೇಮಾಭಿವೃದ್ಧಿಗಾಗಿ ಮತ್ತು ಮ್ಯಾನ್ಯುಯಲ್ ಸ್ಕ್ಯಾವೆಂಜರ್ ಕಾಯ್ದೆಯ ಅನುಷ್ಠಾನದ ಕುರಿತು ಯಾವುದೇ ಪರಿಣಾಮಕಾರಿ ಯೋಜನೆ ಅಥವಾ ಕಾರ್ಯಕ್ರಮಗಳನ್ನು ಸರ್ಕಾರದಿಂದ ರೂಪಿಸಿರುವುದಿಲ್ಲ.
- ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳನ್ನು ಸಮೀಕ್ಷೆ ಮಾಡಿ ಗುರುತಿಸಿರುವುದಿಲ್ಲ. ಅವರಿಗೆ ಪುನರ್ವಸತಿ ಕಲ್ಪಿಸಿರುವುದಿಲ್ಲ. ಮ್ಯಾನ್‌ಹೋಲ್‌ನಲ್ಲಿ ಮೃತಪಟ್ಟ ಕಾರ್ಮಿಕರ ಕುಟುಂಬದ ಅವಲಂಬಿತರಿಗೆ ಸರ್ವೋಚ್ಛ ನ್ಯಾಯಾಲಯದನ್ವಯ ಪರಿಹಾರಧನ ನೀಡಿರುವುದಿಲ್ಲ. ಕಾರಣ ಮೃತಪಟ್ಟ ಕಾರ್ಮಿಕರು ತಮ್ಮ ಮಹಾನಗರ ಪಾಲಿಕೆ ವ್ಯಾಪ್ತಿಗೆ ಒಳಪಡುವುದಿಲ್ಲವೆಂದು ತಿಳಿಸಿರುತ್ತಾರೆ.
- ಅಹಮದಾಬಾದ್ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುವ ಕಾರ್ಮಿಕರು ಕಾರ್ಯನಿರ್ವಹಿಸಲು ಅಸಾಧ್ಯವೆನಿಸಿದ ಸಂದರ್ಭದಲ್ಲಿ ಅವರ ಕುಟುಂಬದ ಅವಲಂಬಿತರಿಗೆ ಅವರ ಕೆಲಸವನ್ನು ನೀಡುವ ಬಗ್ಗೆ ವಿವರಿಸಿರುತ್ತಾರೆ.
- ಕಾರ್ಮಿಕರಿಗೆ ವೇತನ ಇತ್ಯಾದಿ ಸೌಲಭ್ಯಗಳನ್ನು ಒದಗಿಸಲು ನಗರ ಸ್ಥಳೀಯ ಸಂಸ್ಥೆಗಳ ಅನುದಾನದಿಂದಲೇ ಒದಗಿಸಲಾಗುವುದು. ವಾಟರ್ ಬೋರ್ಡ್ ಸ್ವತಂತ್ರವಾಗಿದ್ದು, ಸರ್ಕಾರದಿಂದ ಅನುದಾನ ಬಿಡುಗಡೆಗೊಳಿಸಲಾಗುವುದಿಲ್ಲ.

**ಗುಜರಾತ್ ರಾಜ್ಯದ ಅಧ್ಯಯನ ಪ್ರವಾಸದ ಶಿಫಾರಸ್ಸುಗಳು**

**ಶಿಫಾರಸ್ಸು 1**

**"ಪಿರಾನಾ ಡಂಪಿಂಗ್‌ಯಾರ್ಡ್"**

ಪಾರಂಪರಿಕ ತ್ಯಾಜ್ಯವನ್ನು ಚಾಲಿತ ಸ್ಕ್ರೀನಿಂಗ್ ಯಂತ್ರಗಳ (14 ಮತ್ತು 36 ಎಂಎಂ)ಮೂಲಕ ಬಯೋಮೈನಿಂಗ್ ಮಾಡಿ ಮರುಬಳಕೆ ನಿಷ್ಕ್ರಿಯ ಬಯೋಸಾಯಿಲ್ ಹಾಗೂ ಆರ್‌ಡಿಎಫ್ ರೀತಿ ಬೇರ್ಪಡಿಸಲಾಗುವುದು.

ಪಾರಂಪರಿಕ ತ್ಯಾಜ್ಯವನ್ನು ನಿರ್ವಹಣೆ ಮಾಡಲು ಪ್ರತಿ ಟನ್‌ಗೆ ರೂ.150ಗಳನ್ನು ವೆಚ್ಚ ಮಾಡಲಾಗುತ್ತಿದೆ. ನಿಷ್ಕ್ರೀಯ ತ್ಯಾಜ್ಯವನ್ನು ಸ್ಯಾನಿಟರಿ ಲ್ಯಾಂಡ್‌ಫೀಲ್‌ಗೆ ವರ್ಗಾಯಿಸಲಾಗುವುದು ಹಾಗೂ ನಿಷ್ಕ್ರೀಯ ಬಯೋಸಾಯಿಲ್‌ನ್ನು ಹಳ್ಳ ಹಾಗೂ ತಗ್ಗು ರಸ್ತೆಗಳಲ್ಲಿ ಬಳಸಲಾಗುತ್ತದೆ.

ಆರ್‌ಡಿಎಫ್‌ನ್ನು ವಿದ್ಯುತ್ ಉತ್ಪಾದನೆಗಾಗಿ ವೇಸ್ಟ್ ಟು ಎನರ್ಜಿ ಘಟಕಕ್ಕೆ ರವಾನಿಸಲಾಗುತ್ತಿರುತ್ತದೆ. ಅದರಂತೆ ವಿಂಗಡಿಸಿದ ವಿವಿಧ ವಸ್ತುವನ್ನು ಎಲ್ಲಾ ನಗರಗಳಲ್ಲಿ ಮರುಬಳಸಲು ಅಗತ್ಯಕ್ರಮ ವಹಿಸಲು ಶಿಫಾರಸ್ಸು ಮಾಡಲಾಗುತ್ತದೆ.

**ಶಿಫಾರಸ್ಸು 2**

**ನೆಪ್ರಾ ಕಂಪನಿ ಸಾಲಿಡ್ ವೇಸ್ಟ್ ಮ್ಯಾನೇಜ್‌ಮೆಂಟ್** :

ಮೆಟಿರಿಯಲ್ ರಿಕವರಿ ಫೆಸಿಲಿಟಿ (ಎಂಆರ್‌ಎಫ್)

ಅಹಮದಬಾದ್ ಮಹಾನಗರ ಪಾಲಿಕೆಯು ಪಿಪಿಪಿ ಮಾದರಿಯಲ್ಲಿ ನೆಫ್ರಾ ಸಂಸ್ಥೆಯೊಂದಿಗೆ ಒಣತ್ಯಾಜ್ಯವನ್ನು ವಿಂಗಡಣೆ ಮಾಡಲು ಭಾರತ ದೇಶದಲ್ಲಿಯೇ ಮೊಟ್ಟಮೊದಲ ಸ್ವಯಂಚಾಲಿತ ಯಂತ್ರೋಪಕರಣಗಳ ಮೆಟೀರಿಯಲ್ ರಿಕವರಿ ಫೆಸಿಲಿಟಿ ಘಟಕವಾಗಿರುತ್ತದೆ, ಘಟಕ ನಿರ್ವಹಣೆಯಲ್ಲಿ ಮಹಿಳೆಯರಿಗೆ ಹೆಚ್ಚು ಆದ್ಯತೆ ನೀಡಲಾಗಿರುತ್ತದೆ.

ಅಹಮದಾಬಾದ್ ನಗರದಲ್ಲಿ ಈ ಸಂಸ್ಥೆಯಲ್ಲಿ ರ್‍ಯಾಕ್ ಪಿಕ್ಕರ್ಸ್ (ಚಿಂದಿ ಆಯುವವರು) ರವರಿಗೆ ಒಣ ತ್ಯಾಜ್ಯಕ್ಕೆ ಖರೀದಿಗೆ ರೂ.30 ಪ್ರತಿ ಕೆ.ಜಿ ರಂತೆ ಪಾವತಿಸಲಾಗುತ್ತದೆ. ಇದರಿಂದ ರ್‍ಯಾಕ್ ಪಿಕ್ಕರ್ಸ್ (ಚಿಂದಿ ಆಯುವವರು) ಆರ್ಥಿಕ ಸಾಮರ್ಥ್ಯ ಹೆಚ್ಚಿಸುವ ಉದ್ದೇಶ ಹೊಂದಿರುತ್ತದೆ.

ಅಹಮದಾಬಾಧ್ ನಗರದಲ್ಲಿ ಅಳವಡಿಸಿಕೊಂಡಿರುವ ಈ ಮಾದರಿ (ಎಂಆರ್‌ಎಫ್ ಯೂನಿಟ್) ರಾಜ್ಯದಲ್ಲೂ ಎಲ್ಲಾ ನಗರಗಳಲ್ಲೂ ಅಳವಡಿಸಲು ಸೂಕ್ತವಿರುತ್ತದೆ.

**ಶಿಫಾರಸ್ಸು 3**

ಅಹಮದಾಬಾದ್ ನಗರದಲ್ಲಿ ಕಟ್ಟಡಗಳ ನಿರ್ಮಾಣ ಮತ್ತು ನಿರ್ನಾಮದ ಸಂಧರ್ಭದಲ್ಲಿ ಲಭ್ಯವಾಗುವ ಕಚ್ಚಾವಸ್ತುಗಳನ್ನು ಕ್ರಷ್ ಮಾಡಿ ಪ್ರತ್ಯೇಕಿಸಿ ಬೆಂಚ್‌ಕಲ್ಲುಗಳು, ಕಾಂಪೌಂಡ್‌ವಾಲ್‌ನಂತಹ ಸಿಮೆಂಟ್ ಉಪಕರಣಗಳನ್ನು ಮೆಟ್ರೋ ಹಾಗೂ ರಸ್ತೆಗಳಲ್ಲಿ ಅಳವಡಿಸಿಕೊಳ್ಳಲು ಮಾರಾಟ ಮಾಡಿ ಬಳಸುತ್ತಿರುವುದು ಉತ್ತಮವಾದ ಕಾರ್ಯವಾಗಿದ್ದು, ಈ ಪದ್ಧತಿಯನ್ನು ಅಳವಡಿಸಿಕೊಳ್ಳಬಹುದಾಗಿರುತ್ತದೆ, ಬೆಳವಣಿಗೆಯನ್ನು ಕಂಡಿರುತ್ತದೆ.

**ಶಿಫಾರಸ್ಸು-4**

ಅಹಮದಾಬಾದ್ ನಗರದಲ್ಲಿ ಸಫಾಯಿ ಕರ್ಮಚಾರಿಗಳು ಅನಾರೋಗ್ಯಕ್ಕೆ ತುತ್ತಾದಾಗ ಅಥವಾ ಕೆಲಸ ಮಾಡಲು ಇಚ್ಛಿಸದಿದ್ದಲ್ಲಿ, ಅವರ ಕುಟುಂಬದ ಸದಸ್ಯರಿಗೆ ಅದೇ ಕೆಲಸವನ್ನು ಮುಂದುವರೆಸಲು ಅವಕಾಶ ಮಾಡಿಕೊಟ್ಟಿರುತ್ತಾರೆ. ಈ ಪದ್ಧತಿಯನ್ನು ಪರಿಗಣಿಸಬೇಕಾಗಿರುತ್ತದೆ.

**ಶಿಫಾರಸ್ಸು ೫**

ಅಹಮದಾಬಾದ್‌ನ ಮಹಾನಗರ ಪಾಲಿಕೆಯಲ್ಲಿ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಸಫಾಯಿ ಕರ್ಮಚಾರಿಗಳು/ ಸ್ವಚ್ಛತಾ ಕಾರ್ಮಿಕರನ್ನು ಖಾಯಂಗೊಳಿಸಿರುತ್ತಾರೆ ಹಾಗೂ ಖಾಯಂ ನೌಕರರಿಗೆ ಅರೋಗ್ಯ, ವಸತಿ ಮತ್ತು ಇನ್ನಿತರ ಎಲ್ಲಾ ಸೌಲಭ್ಯಗಳನ್ನು ಒದಗಿಸಲಾಗಿದೆ.

ಈ ಪದ್ಧತಿಯನ್ನು ರಾಜ್ಯದಲ್ಲಿ ಅಳವಡಿಸಲು ಶಿಫಾರಸ್ಸು ಮಾಡಲಾಗುವುದು.

**ಅಧ್ಯಯನ ತಂಡವು ಗುಜರಾತ್ ರಾಜ್ಯದಲ್ಲಿ ಪ್ರವಾಸ ಸಂದರ್ಭದಲ್ಲಿ ಮೇಲ್ಕಂಡ ಅಂಶಗಳನ್ನು ಅಧ್ಯಯನ ನಡೆಸಿ ಗುಜರಾತ್ ರಾಜ್ಯದಲ್ಲಿ ಅನುಷ್ಠಾನಗೊಳಿಸುತ್ತಿರುವ Best Practices ಕರ್ನಾಟಕ ರಾಜ್ಯದಲ್ಲೂ ಅಳವಡಿಸಿಕೊಳ್ಳಲು ಈ ಕೆಳಕಂಡಂತೆ ಶಿಫಾರಸ್ಸು ಮಾಡಿದೆ.**

**"ಪಿರಾನಾ ಡಂಪಿಂಗ್ ಯಾರ್ಡ್"**

ನಗರದ ಕಸ ಮತ್ತು ತ್ಯಾಜ್ಯಗಳನ್ನು ಯಂತ್ರಗಳ ಸಹಾಯದಿಂದ ಬಯೋಮೈನಿಂಗ್ ಮಾಡಿ ಉಪಯೋಗಕ್ಕೆ ಬರುವಂತಹ ಮರುಬಳಕೆ ವಸ್ತುಗಳನ್ನು ಮಣ್ಣಿನ ಪುಷ್ಠೀಕರಣಕ್ಕಾಗಿ ಗೊಬ್ಬರದ ರೂಪದಲ್ಲಿ ಉಪಯೋಗಿಸಿ ತ್ಯಾಜ್ಯವನ್ನು ಹಳ್ಳ ಹಾಗೂ ತಗ್ಗು ರಸ್ತೆಗಳನ್ನು ಸಮತಲಗೊಳಸಲು ಉಪಯೋಗಿಸ ಬಹುದಾಗಿರುತ್ತದೆ.

**ನೆಪ್ರ ಕಂಪನಿ ಸಾಲಿಡ್ ವೇಸ್ಟ್ ಮ್ಯಾನೇಜ್‌ಮೆಂಟ್:**

- ಈ ಸಂಸ್ಥೆಯಲ್ಲಿರುವ ಯಂತ್ರೋಪಕರಣಗಳು ಸ್ವಯಂಚಾಲಿತವಾಗಿದ್ದು, ಭಾರತ ದೇಶದಲ್ಲಿಯೇ ಮೊಟ್ಟಮೊದಲ ಸ್ವಯಂಚಾಲಿತ ಯಂತ್ರದ ಸಂಸ್ಥೆಯಾಗಿರುತ್ತದೆ. ಇಲ್ಲಿನ ಪ್ರತಿಯೊಂದು ಕಾರ್ಯವನ್ನು ಯಂತ್ರದ ಮೂಲಕವೇ ನಿರ್ವಹಿಸಲಾಗುತ್ತಿದ್ದು ಅದ್ಭುತವಾಗಿರುತ್ತದೆ.
- ಈ ಸಂಸ್ಥೆಯಲ್ಲಿ ರ್‍ಯಾಕ್ ಪಿಕ್ಕರ್ಸ್ (ಚಿಂದಿ ಆಯುವವರು) ರವರಿಂದ ಪ್ರತಿದಿನ 10 ಕೆ.ಜಿ ಮಾತ್ರ ಘನತ್ಯಾಜ್ಯವನ್ನು ಖರೀದಿಸಿ ಒಂದು ಕೆ.ಜಿ ಗೆ ರೂ.30/- ರಂತೆ ಪಾವತಿಸುವ ಮೂಲಕ ಇವರ

ಆರ್ಥಿಕ ಸಾಮರ್ಥ್ಯ ಹೆಚ್ಚಿಸುವ ಉದ್ದೇಶವನ್ನು ಹೊಂದಿರುತ್ತದೆ. ಈ ಸಂಸ್ಥೆಯಲ್ಲಿ ಮಹಿಳೆಯರಿಗೆ ಹೆಚ್ಚಿನ ಆದ್ಯತೆ ನೀಡಲಾಗಿರುತ್ತದೆ.

- ಪ್ಲಾಸ್ಟಿಕ್ ಮತ್ತು ಇತರೆ ಘನತ್ಯಾಜ್ಯ ನಿರ್ವಹಣಾ ಘಟಕವು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ.

**ಸಿ ಅಂಡ್ ಡಿ ಯೂನಿಟ್ (ಕನ್ಸ್ಟ್ರಕ್ಷನ್ ಮತ್ತು ಡೆಮೋಲೇಷನ್)**

- ಅಹಮದಾಬಾದ್ ನಗರದಲ್ಲಿ ಕಟ್ಟಡಗಳ ನಿರ್ಮಾಣ ಮತ್ತು ನಿರ್ನಾಮದ ಸಂಧರ್ಭದಲ್ಲಿ ಲಭ್ಯವಾಗುವ ಕಚ್ಚಾವಸ್ತುಗಳನ್ನು ಕ್ರಷ್ ಮಾಡಿ ಪ್ರತ್ಯೇಕಿಸಿ ಬೆಂಚ್‌ಕಲ್ಲುಗಳು, ಕಾಂಪೌಂಡ್‌ವಾಲ್‌ನಂತಹ ಸಿಮೆಂಟ್ ಉಪಕರಣಗಳನ್ನು ಮೆಟ್ರೋ ಹಾಗೂ ರಸ್ತೆಗಳಲ್ಲಿ ಅಳವಡಿಸಿಕೊಳ್ಳಲು ಮಾರಾಟ ಮಾಡಿ ಬಳಸುತ್ತಿರುವುದು ಉತ್ತಮವಾದ ಕಾರ್ಯವಾಗಿದ್ದು, ಈ ಪದ್ಧತಿಯನ್ನು ಅಳವಡಿಸಿಕೊಳ್ಳ ಬಹುದಾಗಿರುತ್ತದೆ.

**ವೇಸ್ಟ್ ಟು ಎನರ್ಜಿ ಪ್ಲಾಂಟ್ (waste to energy plant)**

ತ್ಯಾಜ್ಯ ವಸ್ತುಗಳನ್ನು ಸಂಗ್ರಹಿಸಿ ಇವುಗಳನ್ನು ಎನರ್ಜಿಯಾಗಿ ಪರಿವರ್ತಿಸುವ ವಿಧಾನವನ್ನು ಅಳವಡಿಸಿಕೊಳ್ಳಲು ಉದ್ದೇಶಿಸಿರುವ ನಿರ್ಮಾಣ ಹಂತದಲ್ಲಿರುವ ಘಟಕವನ್ನು ನಿರ್ಮಿಸುವುದು ಅವಶ್ಯವಿರುತ್ತದೆ.

- ಅಹಮದಾಬಾದ್ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುವ ಕಾರ್ಮಿಕರು ಸೇವೆಯಲ್ಲಿರುವಾಗಲೇ ಅಸಾಧ್ಯವೆನಿಸಿದಾಗ ಕುಟುಂಬದ ಅವಲಂಬಿತರಿಗೆ ಅವರ ಕೆಲಸವನ್ನು ನೀಡುವ ಪದ್ಧತಿಯನ್ನು ಅಳವಡಿಸಿಕೊಳ್ಳುವುದು ಸೂಕ್ತವಾಗಿರುತ್ತದೆ.

**ಎಂ.ಶಿವಣ್ಣ**
ಅಧ್ಯಕ್ಷರು
ಕರ್ನಾಟಕ ರಾಜ್ಯ
ಸಫಾಯಿ ಕರ್ಮಚಾರಿ
ಆಯೋಗ

**ಕೆ.ಪಿ.ವೆಂಕಟೇಶ್**
ಅಧ್ಯಕ್ಷರು
ಕರ್ನಾಟಕ ರಾಜ್ಯ ಸಫಾಯಿ
ಕರ್ಮಚಾರಿ ಅಭಿವೃದ್ಧಿ ನಿಗಮ

**ಎಸ್.ಎಂ.ಗಿರೀಶ್**
ಕಾರ್ಯನಿರ್ವಾಹಕ ಅಭಿಯಂತರರು
ಪೌರಾಡಳಿತ ನಿರ್ದೇಶನಾಲಯ,
ಬೆಂಗಳೂರು

**ಯೋಗೇಶ್**
ಸಹಾಯಕ ಕಾರ್ಯಪಾಲಕ
ಅಭಿಯಂತರರು
ಘನತ್ಯಾಜ್ಯ ಜಂಟಿ ಆಯುಕ್ತರ
ಪರವಾಗಿ ಬೃಹತ್ ಬೆಂಗಳೂರು
ಮಹಾನಗರ ಪಾಲಿಕೆ

**ಸಂಧ್ಯಾ**
ವೈದ್ಯರು (ಆರೋಗ್ಯಾಧಿಕಾರಿ)
ಮಹಾನಗರ ಪಾಲಿಕೆ ವೈದ್ಯರು

**ಓಬಳೇಶ್**
ರಾಜ್ಯ ಸಂಚಾಲಕರು
ಸಫಾಯಿ ಕರ್ಮಚಾರಿ ಕಾವಲು
ಸಮಿತಿ, ಕರ್ನಾಟಕ

**ಚಂದ್ರಕಲಾ**
ಕಾರ್ಯದರ್ಶಿ
ಕರ್ನಾಟಕ ರಾಜ್ಯ ಸಫಾಯಿ
ಕರ್ಮಚಾರಿ ಆಯೋಗ

**ಕಿರಣ್ ಚಂದ್ರ ಮುತ್ತು**
ಪರಿಸರ ಅಭಿಯಂತರರು
ನಿರ್ದೇಶಕರ ಪರವಾಗಿ
ಪೌರಾಡಳಿತ ನಿರ್ದೇಶನಾಲಯ,
ಬೆಂಗಳೂರು

**ನಿಕಿತಾ**
ಆಯುಕ್ತರ ಪರವಾಗಿ
ಮಹಾನಗರ ಪಾಲಿಕೆ
ತುಮಕೂರು

**ಬಿ.ಎಸ್.ವಿಮಲ**
ಅಧ್ಯಕ್ಷರ ಆಪ್ತ ಕಾರ್ಯದರ್ಶಿ
ಕರ್ನಾಟಕ ರಾಜ್ಯ ಸಫಾಯಿ
ಕರ್ಮಚಾರಿ ಆಯೋಗ

**ರಾಘವೇಂದ್ರ**
ಅಧ್ಯಕ್ಷರ ಆಪ್ತ ಸಹಾಯಕರು,
ಕರ್ನಾಟಕ ರಾಜ್ಯ ಸಫಾಯಿ
ಕರ್ಮಚಾರಿ ಆಯೋಗ



ದಿನಾಂಕ:11.10.2022ರಂದು ಗುಜರಾತ್‌ನಲ್ಲಿರುವ ಸಫಾಯಿ ಕರ್ಮಚಾರಿ ಸಂಘಟನೆಯ ಎನ್.ಜಿ.ಒ ಗಳೊಂದಿಗೆ ಸಫಾಯಿ ಕರ್ಮಚಾರಿ/ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್‌ಗಳ ಯೋಜನೆಗಳ ಅನುಷ್ಠಾನದ ಕುರಿತು ಚರ್ಚೆ



ದಿನಾಂಕ:11.10.2022 ಅಹಾಮಾದಬಾದ್ ಮಹಾನಗರ ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಫಾಯಿ ಕರ್ಮಚಾರಿಗಳಿಗೆ ಅನುಷ್ಠಾನಗೊಳಿಸಿರುವ ಯೋಜನೆಗಳ ಬಗ್ಗೆ ಚರ್ಚೆ.



ದಿನಾಂಕ:11.10.2022ರಂದು ಅಹಮದಾಬಾದ್‌ನ ಮಹಾನಗರ ಪಾಲಿಕೆಯ ಘನತ್ಯಾಜ್ಯ ನಿರ್ವಹಣೆ ಕುರಿತು, ಆಯುಕ್ತರು, ಅಧ್ಯಯನ ತಂಡಕ್ಕೆ ವಿವರಿಸಿದ ಕ್ಷಣ.



ದಿನಾಂಕ:12.10.2022ರಂದು ಘನತ್ಯಾಜ್ಯ ನಿರ್ವಹಣಾ ಘಟಕದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಫಾಯಿ ಕರ್ಮಚಾರಿಗಳಿಗೆ ನೀಡುತ್ತಿರುವ ಸುರಕ್ಷತಾ ಪರಿಕರಗಳ ಬಗ್ಗೆ ಅಧ್ಯಯನ ತಂಡದ ವಿಕ್ಷಣೆ.



ದಿನಾಂಕ:12.10.2022ರಂದು ಘನತ್ಯಾಜ್ಯ ನಿರ್ವಹಣಾ ಘಟಕದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಫಾಯಿ ಕರ್ಮಚಾರಿಗಳ ಬಗ್ಗೆ ಅಧ್ಯಯನ ತಂಡದ ವೀಕ್ಷಣೆ.



"ಪಿರಾನಾ ಡಂಪಿಂಗ್ ಯಾರ್ಡ್"ನ ನಿರ್ವಹಣೆಯ ಕುರಿತು ಅಧ್ಯಯನ ತಂಡವು ವಿಕ್ಷಣೆ ನಡೆಸಿದ ಕ್ಷಣ.